ಅನ್ನಿಸಿತು ಅವನಿಗೆ. ಉಸ್ತಾದರಿಗೆ ದೊರೆಯದ ಗೆಲುವು ಈ ಸಂಗೀತದಲ್ಲಿ ತನಗೇನು ದೊರೆತೀತು? ಸೋಹನಿಯ ಜೊತೆ ಯಾರಿಗೂ ತಿಳಿಯದೇ ದೂರ ಎಲ್ಲಾದರೂ ಹೊರಟು ಹೋಗಿ ಬಿಡೋಣವೇ? ಈ ಸಂಗೀತವೆಂಬ ಬಿಸಿಲುಗುದುರೆಯ ಬೆನ್ನು ಹತ್ತಿ ಉಸ್ತಾದರು ಬೇಸರಿಸಿದ್ದು ಸಾಕು ಎಂದು ಬಾಗಿಲು ತೆರೆದ ಮಿಹಿರ. ಸೂರ್ಯ ಇನ್ನೂ ಉದಯಿಸಿಲ್ಲ. ಚುಮುಚುಮು ಚಳಿಯಲ್ಲಿ ಆ ಬಾಗಿಲ ಬಳಿಯೇ ಒಂದು ರಜಾಯಿ ಹಾಸಿ ತಂಬೂರಿ ಹಿಡಿದು ಉಸ್ತಾದರು ಕೂತು ಬಿಟ್ಟಿದ್ದಾರೆ. ಅವನು ಅಲ್ಲಿ ತಲುಪುತ್ತಲೇ ತಂಬೂರಿಯನ್ನು ನಿಷಾದ ಸ್ವರಕ್ಕೆ ಸೇರಿಸಿ ಝೇಂಕರಿಸತೊಡಗಿದರು ಅವರು. ಮಾರವಾ ಹಾಡುವ ಭೂಮಿಕೆ ಸಿದ್ಧವಾಗಿದೆ. ಇವನನ್ನು ನೋಡುತ್ತಲೇ 'ಮಿಹಿರ ನಿನ್ನೆ ರಾತ್ರಿ ನೀನು ಹಾಡಿದ ಮಾರವಾದಲ್ಲಿ ನಾನು ಎಂದೂ ನೋಡದ ಹೊಸ ಹೊಸ ಜಾಗಗಳು ಇದ್ದವು. ಒಮ್ಮೆ ಹಾಡಿ ತೋರಿಸುತ್ತೀಯಾ? ಅದನ್ನೇ ಕೇಳೋಣ ಅಂತ ಬಂದೆ. ರಾತ್ರಿ ನಿದ್ರೆ ಬರಲೇ ಇಲ್ಲ. ಮುಂಜಾನೆಯೇ ಇತ್ತ ಹೊರಟೆ. ನೀನು ಮಲಗಿದ್ದೆ ಅದಕ್ಕೆ ಇಲ್ಲೇ ಕೂತಿದ್ದೆ' ಎಂದರು ಉಸ್ತಾದರು. ತಂಬೂರಿ ಅವರ ಕೈಯಿಂದ ಮಿಹಿರನ ಕೈಗೆ ಬಂತು. 'ಇದು ನನ್ನ ಅಜ್ಜನ ಅಂದರೆ ಬಡೇ ಉಸ್ತಾದರ ತಂಬೂರಿ. ಇನ್ನು ಮೇಲೆ ನಿನ್ನದು. ಅಜ್ಜನಂತೆ ದರ್ಬಾರಿನಲ್ಲಿ ನಾನು ಇದನ್ನು ಮಿಡಿಯುತ್ತ ಹಾಡಬೇಕು ಅಂತ ಅಂದುಕೊಂಡಿದ್ದೆ. ಆದರೆ, ಅದು ಇನ್ನು ಸಾಧ್ಯವಿದೆ ಎಂದು ಅನ್ನಿಸುತ್ತಿಲ್ಲ. ನಿನ್ನ ಧ್ವನಿಯಲ್ಲಿ ನನಗೆ ಬಡೇ ಉಸ್ತಾದರ ಛಾಪು ಕಾಣಿಸುತ್ತಿದೆ ಈಗ. ನೀನು ಹಾಡುವ ಮಾರವಾ ಅಂತೂ ನಿನ್ನದೇ. ಈ ರೀತಿಯ ಮಾರವಾ ಪ್ರಸ್ತುತಿ ನಾನು ಎಲ್ಲೂ ಕೇಳಿಲ್ಲ ಬೇಟಾ' ಎಂದು ಮಿಹಿರನನ್ನು ಗಟ್ಟಿಯಾಗಿ ತಬ್ಬಿ ಕೊಂಡರು ಮುಷೀದ್ ಖಾನರು. ಆ ಕ್ಷಣಕ್ಕೆ ಅವನಲ್ಲಿ ಸೋಹನಿಯ ವೇಗ ತಗ್ಗಿತ್ತು. ಉಸ್ತಾದರು ಒಮ್ಮೆಯೂ ಹಾಗೆಲ್ಲ ಹೊಗಳಿದವರಲ್ಲ. ಶಿಷ್ಯರನ್ನು ಹೊಗಳಿ ಅಟ್ಟಕ್ಕೇರಿಸಿ ಅವರ ಬೆಳವಣಿಗೆ ಕುಂಠಿತಗೊಳಿಸಬಾರದು ಎಂದು ಯಾವಾಗಲೂ ಹೇಳುವವರು ಅವರು. ಮಿಹಿರ ಒಂದಷ್ಟು ಹೊತ್ತು ಮಾರವಾ ರಾಗ ಹಾಡಿ ತೋರಿಸಿದ ಅವರಿಗೆ. ಅವರ ಆಸೆಯಂತೆ. ರಾಗದ ಉತ್ತರಾಂಗಕ್ಕೆ ನೆಗೆಯುವಾಗ ಸೋಹನಿರಾಗದ ಛಾಯೆ ಬರದಂತೆ ತುಂಬಾ ಮುತುವರ್ಜಿ ವಹಿಸಿದ್ದ ಮಿಹಿರ. ಹತ್ತು ದಿನದಲ್ಲೇ ಅವನಲ್ಲಿ ರಾಗದ ಸಿದ್ಧಿಯ ಲಕ್ಷಣಗಳು ಉಸ್ತಾದರಿಗೆ ಗೋಚರಿಸಿದ್ದವು.

ಚಿಲ್ಲಾದಲ್ಲಿ ನಿಜಕ್ಕೂ ಅಂಥಾ ಶಕ್ತಿ ಇದೆಯೆ? ಅವನಿಗಾಶ್ಚರ್ಯವಾಯಿತು. ನಿರಂತರ ಒಂದೇ ಸ್ಥಳದಲ್ಲಿ ಕುಳಿತು ರಾತ್ರಿಯಾದರೆ ದೀಪವನ್ನೂ ಹಚ್ಚದೇ ಬೆಳಕು ತೋರಲು ರಾಗವನ್ನೇ ನೆಚ್ಚಿಕೊಳ್ಳುವುದು. ಸಾಧಕನು ಶೂನ್ಯವಾಗಿ ರಾಗದ ತೆಕ್ಕೆಗೆ ಮೈ ಮನಸ್ಸು ಅರ್ಪಿಸಿ ಮುನ್ನಡೆಸಲು ಕೋರಿಕೊಳ್ಳುವುದು. ಇಷ್ಟು ಮಾಡಲು ಎಲ್ಲರಿಗೂ ಸಾಧ್ಯವಿಲ್ಲ. ಆದರೆ, ಮಿಹಿರನಿಗೆ ಸಾಧ್ಯವಾಗಿತ್ತು. ಋಷಿಗಳು ಆಚರಿಸುತ್ತಿದ್ದ ತಪಸ್ಸು ಇದೇ ಇರಬೇಕು ಎಂದು ಅವನಿಗೆ ಅನ್ನಿಸಿದ್ದಿದೆ. ಷಡ್ಜವನ್ನು ಹಿಡಿದ ಒಂದೇ ಕ್ಷಣಕ್ಕೆ ತನ್ಮಯತೆ ಆವರಿಸಿ ಮೈ ಹಗುರವಾಗಿ ರಾಗವು ಮಾತೆಯಾಗಿ ಮುನ್ನಡೆಸುತ್ತಾಳೆ. ಮತ್ತೆ ಯಾವಾಗ ಹಾಗೆ ಕೂರುತ್ತೇನೆ ಎಂಬ ತವಕ ಆವರಿಸುತ್ತದೆ. ದಿನ ಕಳೆದಂತೆ ವಿಶ್ರಾಂತಿಯ ಹಂಬಲ ಕಡಿಮೆಯಾಗಿ ರಾಗದೊಂದಿಗೆ ಅದ್ವೈತವೇರ್ಪಡುತ್ತದೆ. ಇದು ಅವನ ಅನುಭವ. ಸ್ವರಗಳು ವಿಶಾಲವಾಗಿ ಗೋಚರಿಸಿ ಅವುಗಳ ನಡುವೆ ವಿಹರಿಸುವುದು ಪ್ರಾಣವಾಯುವಿನಷ್ಟು ಮುಖ್ಯವೆನ್ನಿಸುತ್ತದೆ.

ಆಮೇಲಿನ ದಿನಗಳಲ್ಲಿ ಗುರುಗಳು ಬಂದದ್ದು, ಆಹಾರ ಸೇವಿಸಿದ್ದು, ನಿದ್ರಿಸಿದ್ದು ಯಾವುದೂ ಅವನಿಗೆ ಸ್ಪಷ್ಟವಿಲ್ಲ. ರಾಗದ ಆವರ್ತನ ಮತ್ತು ಸ್ವರಗಳ ಅನುರಣನವಷ್ಟೇ ಅವನಲ್ಲಿ ಸ್ಥಾಯಿಯಾಗಿತ್ತು. ನಲವತ್ತನೇ ದಿನದ ರಾತ್ರಿಯ ನಾಲ್ಕನೇ ಪ್ರಹರದಲ್ಲಿ ಉಸ್ತಾದರು ಬಂದು ಮಾರವಾ ಹಾಡುತ್ತಿದ್ದ ಅವನ ಪಕ್ಕದಲ್ಲಿ ಕುಳಿತು ತಂಬೂರಿಯನ್ನು ಪಂಚಮಕ್ಕೆ ಹೊಂದಿಸಿ ಭೈರವಿ ಹಾಡಿದರು. ಅದು ಮುಕ್ತಾಯದ ಸಂಕೇತ. ಆದರೆ, ಮಿಹಿರನ ಮಾರವಾದ ಆಲಾಪಗಳ ಮುಂದೆ ಉಸ್ತಾದರ ಭೈರವಿ ಉದಯಿಸಲೇ ಇಲ್ಲ. ಮಿಹಿರನ ಏಕಾಗ್ರತೆ ಭಂಗವಾಗಲೂ ಇಲ್ಲ. ಉಸ್ತಾದರು ಭೈರವಿ ಮುಗಿಸಿ ಮಿಹಿರನನ್ನು ಹೆಗಲು ಮುಟ್ಟಿ ಎಬ್ಬಿಸಿ ಹೊರಕ್ಕೆ ಕರೆದೊಯ್ದರು. ಹೆಗಲಿಗೆ ಹಾಕಿದ ಕೈ ತೆಗೆಯದೇ ಅವರು ಅವನೊಂದಿಗೆ ಮಿತ್ರನಂತೆ ನಡೆದರು. 'ಮಿಹಿರ ನಿನ್ನ ಚಿಲ್ಲಾ ಮುಗಿದಿದೆ. ಮಾರವಾ ಬಿಟ್ಟು ಬೇರೇನಾದರು ಹಾಡು, ಸಮಯ ಮತ್ತು ಪರಿಸರಕ್ಕೆ ಹೊಂದಿಕೊಂಡು' ಎಂದು ಆದೇಶ ಕೊಟ್ಟರು. ಅರೆ ಕ್ಷಣ ಯೋಚಿಸಿದ ಮಿಹಿರ ಬಡೆ